ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1100 |
| ಸದಸ್ಯರ ಹೆಸರು | : | ಶ್ರೀ ಅರುಣ ಶಹಾಪುರ |
| ಉತ್ತರಿಸುವ ದಿನಾಂಕ | : | 25-02-2022 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ವಸತಿ ಶಾಲೆಗಳಲ್ಲಿ ಜವಾಹಾರ/ ನವೋದಯ ಮಾದರಿಯ ಎಷ್ಟು ವಸತಿ ಶಾಲೆಗಳು ನಡೆಯುತಿವೆ; ಕಾರ್ಯ ನಿರತ ಸಿಬ್ಬಂದಿಗಳ ವಿವರ ನೀಡುವುದು; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ನವೋದಯ ಮಾದರಿಯ 826 ವಸತಿ ಶಾಲೆ/ಕಾಲೇಜುಗಳು (ಪರಿಶಿಷ್ಟ ಜಾತಿ-503, ಪರಿಶಿಷ್ಟ ವರ್ಗ-156, ಹಿಂದುಳಿದ ವರ್ಗ-167) ಕಾರ್ಯನಿರ್ವಹಿಸುತ್ತಿವೆ.<br><br>ಈ ವಸತಿ ಶಾಲೆ/ಕಾಲೇಜುಗಳಲ್ಲಿ 8,831 ಬೋಧಕ ಹಾಗೂ 10,157 ಬೋಧಕೇತರ ಸಿಬ್ಬಂಧಿಗಳು ಸೇರಿ ಒಟ್ಟು 18,988 ಹುದ್ದೆಗಳು ಮಂಜೂರಾಗಿರುತ್ತವೆ.<br><br>ವಸತಿ ಶಾಲೆ/ಕಾಲೇಜುಗಳಿಗೆ ಮಂಜೂರಾಗಿರುವ 8,831 ಬೋಧಕರ ಪೈಕಿ 4,724 ಖಾಯಂ ಸಿಬ್ಬಂದಿ, 2,213 ಅತಿಥಿ ಸಿಬ್ಬಂದಿ ಹಾಗೂ 429 ಹೊರಸಂಪನ್ಮೂಲ ಬೋಧಕ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಉಳಿಕೆ 1,455 ಹುದ್ದೆಗಳು ಖಾಲಿ ಇವೆ.<br>10,172 ಬೋಧಕೇತರ ಸಿಬ್ಬಂದಿಗಳ ಪೈಕಿ 1,077 ಖಾಯಂ ಸಿಬ್ಬಂದಿ, 8,900 ಹೊರಸಂಪನ್ಮೂಲ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. |
| ಆ) | ಅಟಲ್ ಬಿಹಾರಿ ವಾಜಪೇಯಿ, ಏಕಲವ್ಯ ಮಾದರಿ ವಸತಿ ಶಾಲೆ, ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಇನ್ನಿತರೆ ವಸತಿ ಶಾಲೆಗಳು ಬೇರೆ ಬೇರೆ ಮಾದರಿಯಲ್ಲಿ ಏಕೆ ನಡೆಯುತಿವೆ; ಈ ಎಲ್ಲಾ ವಸತಿ ಶಾಲೆಗಳಲ್ಲಿ ಒಂದೇ ರೀತಿಯ ಜವಹಾರ ನವೋದಯ ಮಾದರಿಯ ವಿದ್ಯಾರ್ಥಿಗಳ ದಾಖಲಾತಿ ಮಾದರಿ ಮತ್ತು ಸಿಬ್ಬಂದಿ ಕಾರ್ಯವೈಖರಿಯ ಮಾದರಿ ಅಳವಡಿಸಿಕೊಳ್ಳಲು ಇರುವ ತೊಂದರೆಗಳೇನು; (ವಿವರವಾದ ಮಾಹಿತಿಯನ್ನು ನೀಡುವುದು) | ಮೊರಾರ್ಜಿ ದೇಸಾಯಿ, ಶ್ರೀಮತಿ ಇಂದಿರಾಗಾಂಧಿ, ಡಾ. ಬಿ.ಆರ್. ಅಂಬೇಡ್ಕರ್, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು 6 ರಿಂದ 10 ನೇ ತರಗತಿಯವರೆಗೆ ನಡೆಸಲು ಮಂಜೂರಾತಿ ನೀಡಿದೆ.<br><br>114 ಕಿತ್ತೂರು ರಾಣಿ ಚೆನ್ನಮ್ಮ, ಅಟಲ್ ಬಿಹಾರಿ ವಾಜಪೇಯಿ ಹಾಗೂ ಏಕಲವ್ಯ ವಸತಿ ಶಾಲೆಗಳನ್ನು 6 ರಿಂದ 12 ನೇ ತರಗತಿಯ ವರೆಗೆ ಕಾರ್ಯನಿರ್ವಹಿಸುತ್ತಿವೆ.<br><br>6 ರಿಂದ 10 ನೇ ತರಗತಿಯ ವರೆಗೆ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ, ಶ್ರೀಮತಿ ಇಂದಿರಾಗಾಂಧಿ, ಡಾ.ಬಿ.ಆರ್. ಅಂಬೇಡ್ಕರ್, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಪ್ರತಿ ಶಾಲೆಗೆ 25 ಹುದ್ದೆಗಳನ್ನು |
| ಇ) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಎಲ್ಲಾ ವಸತಿ ಶಾಲೆಗಳನ್ನು ಏಕ ರೂಪ ಮಾದರಿ ಅಂದರೆ ಜವಹಾರ ನವೋದಯ ಮಾದರಿಯಂತೆ ನಡೆಸದಿರಲು ಕಾರಣವೇನು? (ವಿವರವನ್ನು ಒದಗಿಸುವುದು) | ಹಾಗೂ 250 ವಿದ್ಯಾರ್ಥಿಗಳ ಸಂಖ್ಯಾಬಲದಂತೆ ಮಂಜೂರು ಮಾಡಲಾಗಿರುತ್ತದೆ. ಅದರಂತೆ ಸದರಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿರುತ್ತವೆ.<br><br>114 ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಿಗೆ 6 ರಿಂದ 12 ನೇ ತರಗತಿಯವರೆಗೆ ಮಂಜೂರು ಮಾಡಲಾಗಿದ್ದರೂ ಸಹ 25 ಬೋಧಕ/ ಬೋಧಕೇತರ ಹುದ್ದೆಗಳನ್ನು ಮಾತ್ರ ಮಂಜೂರು ಮಾಡಲಾಗಿರುತ್ತದೆ. ಸದರಿ ವಸತಿ ಶಾಲೆಗಳಲ್ಲಿ 11 ಮತ್ತು 12 ನೇ ತರಗತಿಗಳನ್ನು ಪ್ರಾರಂಭಿಸಲು ಅನುಮತಿ ಹಾಗೂ ಅವಶ್ಯಕ ಹುದ್ದೆಗಳನ್ನು |

| | | |
|---|---|---|
| | | ಮಂಜೂರು ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಲ್ಲಿ ಪ್ರತಿ ಶಾಲೆಗೆ 50 ಬೋಧಕ/ಬೋಧಕೇತರ ಹುದ್ದೆಗಳನ್ನು ಹಾಗೂ 560 ವಿದ್ಯಾರ್ಥಿಗಳ ಸಂಖ್ಯಾಬಲದಂತೆ ಮಂಜೂರು ಮಾಡಲಾಗಿರುತ್ತದೆ.<br><br>ಸಂಘದ ವಸತಿ ಶಾಲೆಗಳಿಗೆ ವಿಭಿನ್ನ ಮಾದರಿಯಲ್ಲಿ ಹುದ್ದೆಗಳನ್ನು ಹಾಗೂ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಮಂಜೂರು ಮಾಡಲಾಗಿರುವುದರಿಂದ ಅದರಂತೆ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.<br><br>ಕೇಂದ್ರ ಸರ್ಕಾರದ ನವೋದಯ ಮಾದರಿಯಂತೆ ಸಂಘದ ವಸತಿ ಶಾಲೆಗಳಿಗೂ ಸಹ 6 ನೇ ತರಗತಿಯ ವಿದ್ಯಾರ್ಥಿಗಳ ದಾಖಲಾತಿಗೆ ಪ್ರವೇಶ ಪರೀಕ್ಷೆಗಳನ್ನು ನಡೆಸಿ, ಮೆರಿಟ್ ಹಾಗೂ ಮೀಸಲಾತಿ ಅನುಸಾರ ದಾಖಲಾತಿ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ.<br><br>ಸಂಘದ ಅಧೀನದ ವಸತಿ ಶಾಲೆಗಳಲ್ಲಿನ ಸಿಬ್ಬಂದಿಗಳು ಜವಹಾರ/ನವೋದಯ ಮಾದರಿಯ ವಸತಿ ಶಾಲೆಗಳಲ್ಲಿನ ಸಿಬ್ಬಂದಿಗಳಂತೆಯೇ ವಸತಿ ಶಾಲೆಗಳಲ್ಲಿಯೇ ವಾಸವ್ಯ ಹೊಂದಿದ್ದು, ನವೋದಯ ಮಾದರಿಯಲ್ಲಿ ಬೋಧನಾ ವ್ಯವಸ್ಥೆ ಇರುವಂತೆ ವಸತಿ ಶಾಲೆಗಳಲ್ಲಿಯೂ ಸಹ ಬೋಧನಾ ವ್ಯವಸ್ಥೆ ಇರುತ್ತದೆ.<br><br>ಜವಹಾರ/ನವೋದಯ ಮಾದರಿಯ ವಸತಿ ಶಾಲೆಗಳಲ್ಲಿ ಸಿ.ಬಿ.ಎಸ್.ಸಿ ವಿಷಯಗಳನ್ನು ಅಳವಡಿಸಿಕೊಂಡಿದ್ದು. ಸಂಘದ ವಸತಿ ಶಾಲೆಗಳಲ್ಲಿ ಎನ್.ಸಿ.ಇ.ಆರ್.ಟಿ ವಿಷಯಗಳನ್ನು ಅಳವಡಿಸಿಕೊಳ್ಳಲಾಗಿದೆ.<br><br>ಈಗಾಗಲೇ 31 ವಸತಿ ಶಾಲೆಗಳನ್ನು 6 ರಿಂದ 12 ನೇ ತರಗತಿಯವರಗೆ ಉನ್ನತೀಕರಿಸಿ ಕಾರ್ಯನಿರ್ವಹಿಸುತ್ತಿವೆ.<br><br>ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಎಲ್ಲಾ ವಸತಿ ಶಾಲೆಗಳನ್ನು ಹಂತ ಹಂತವಾಗಿ ಮೇಲ್ದರ್ಜೆಗೇರಿಸಿ ಜವಹಾರ/ನವೋದಯ ಮಾದರಿಯಂತೆ ಏಕರೂಪ ಮಾದರಿ ವಸತಿ ಶಾಲೆಗಳನ್ನಾಗಿಸಲು ಕ್ರಮವಹಿಸಲಾಗುವುದು. |

ಸಕಇ 118 ಮೊದೇಶಾ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು